ಪ್ರಜಾವಾಣಿ

Online Newspaper Clipping Service

**Dtd- Tuesday, 05th, February- 2019**

Page No.3b

# 100 ಅಧ್ಯಾಪಕರಿಗೆ ಐಐಎಸ್‌ಸಿಯಲ್ಲಿ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸಂಶೋಧನಾ ಚಟುವಟಿಕೆಗಳಿಗೆ ಮರುಜೀವ ನೀಡುವುದರ ಜೊತೆಗೆ, 100 ಅಧ್ಯಾಪಕರಿಗೆ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ತರಬೇತಿ ನೀಡಲು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ತೀರ್ಮಾನಿಸಿದೆ.

ಮಾಲೆಕ್ಯುಲಾರ್ ಬಯಾಲಜಿ ಮತ್ತು ಸೆಲ್ ಬಯಾಲಜಿಯಲ್ಲಿ ಅಧ್ಯಾಪಕರಿಗೆ ಆರು ವಾರಗಳ ತರಬೇತಿ ವ್ಯವಸ್ಥೆ ಮಾಡಲಾಗಿದೆ. ತರಬೇತಿ ಪಡೆಯುವ ಸರ್ಕಾರಿ ಪ್ರಾಧ್ಯಾಪಕರಿಗೆ ತರಬೇತಿ ವೆಚ್ಚ ತಲಾ ₹ 1 ಲಕ್ಷ ನೀಡಲಾಗುವುದು. ಖಾಸಗಿ ಕಾಲೇಜುಗಳು ತಮ್ಮ ಪ್ರಾಧ್ಯಾಪಕರ ವೆಚ್ಚ ಭರಿಸಬೇಕಾಗುತ್ತದೆ ಎಂದು ಕುಲಪತಿ ಡಾ.ಎಸ್. ಸಚ್ಚಿದಾನಂದ ಹೇಳಿದರು.

**ಮುಖ್ಯಾಂಶಗಳು**

- ಸಂಶೋಧನೆಗಾಗಿ ₹10 ಲಕ್ಷದಿಂದ ₹40 ಲಕ್ಷದವರೆಗೆ ನೆರವು
- ಪೇಟೆಂಟ್ ಪಡೆಯಲು ಸಂಶೋಧಕರಿಗೆ ನೆರವು
- ನಾಲ್ಕು ಸಂಶೋಧನೆಗಳಿಗೆ ಪೇಟೆಂಟ್‌ಗಾಗಿ ಅರ್ಜಿ

ಅಲ್ಲದೆ, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ನ್ಯಾನೊ ತಂತ್ರಜ್ಞಾನದ ಬಗ್ಗೆಯೂ ವೈದ್ಯ, ದಂತ ವೈದ್ಯ, ಫಾರ್ಮಸಿ, ಆಯುಷ್, ಸೂಪರ್ ಸ್ಪೆಷಾಲಿಟಿಯಲ್ಲಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಬೋಧಕರಿಗೆ ತರಬೇತಿ ನೀಡಲಾಗುವುದು. ಇದಕ್ಕಾಗಿ ₹89 ಲಕ್ಷ ನಿಗದಿ ಮಾಡಲಾಗಿದೆ ಎಂದು ಅವರು ವಿವರಿಸಿದರು.

**ಸಂಶೋಧನೆಗೆ ₹20 ಕೋಟಿ:** ವಿಶ್ವವಿದ್ಯಾಲಯದ ಸಂಶೋಧನಾ ಚಟುವಟಿಕೆಗಳಿಗಾಗಿ ಈ ಸಾಲಿನಲ್ಲಿ ₹ 20 ಕೋಟಿ ನಿಗದಿ ಮಾಡಲಾಗಿದೆ. ಕಾಲೇಜು ಮಟ್ಟದಲ್ಲಿ ಸಂಶೋಧನಾ ಚಟುವಟಿಕೆಗಳಿಗಾಗಿ ವೈದ್ಯಕೀಯ ಕಾಲೇಜುಗಳಿಗೆ₹ 1 ಕೋಟಿ, ದಂತ ಮತ್ತು ಆಯುಷ್ ಕಾಲೇಜುಗಳು ₹50ಲಕ್ಷ, ಫಾರ್ಮಸಿ ಮತ್ತು ಅಲೈಡ್ ಸೈನ್ಸ್ ಕಾಲೇಜುಗಳು ₹ 10 ಲಕ್ಷ ಮೀಸಲಿಡಬೇಕು ಎಂದ ಅವರು ಹೇಳಿದರು.

ಸಂಶೋಧನೆಗಾಗಿ ಐಐಎಸ್‌ಸಿ, ಎನ್‌ಸಿಬಿಎಸ್, ಜೆಎನ್‌ಎಆರ್‌ಸಿ, ಸೆಂಟರ್‌ಫಾರ್ ಹ್ಯೂಮನ್ ಜೆನಿಟಿಕ್ಸ್ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಪ್ರತಿ ವರ್ಷ ಸಂಶೋಧನೆಗಾಗಿ 250 ರಿಂದ 300 ಅರ್ಜಿಗಳು ಬರುತ್ತವೆ ಎಂದರು.

**ಸಂಶೋಧನಾ ಜರ್ನಲ್ ಪ್ರಕಟ:** ವಿಶ್ವವಿದ್ಯಾಲಯವ್ಯಾಪ್ತಿಯಲ್ಲಿನಡೆಯುವ ಸಂಶೋಧನಾ ಲೇಖನಗಳನ್ನು ಪ್ರಕಟಿಸಲು ಅರ್ಧ ವಾರ್ಷಿಕ ಮತ್ತು ತ್ರೈಮಾಸಿಕ ನಿಯತಕಾಲಿಕೆಗಳನ್ನು ಪ್ರಕಟಿಸಲಾಗುವುದು. ಇದಕ್ಕಾಗಿ ಜರ್ನಲ್ ಆಫ್ ಮೆಡಿಕಲ್ ಸೈನ್ಸಸ್, ಜರ್ನಲ್ ಆಫ್ ಡೆಂಟಲ್ ಸೈನ್ಸಸ್, ಜರ್ನಲ್ ಆಫ್ ಫಾರ್ಮಸ್ಯೂಟಿಕಲ್ ಸೈನ್ಸಸ್, ಜರ್ನಲ್ ಆಫ್ ಆಯುಷ್ ಸೈನ್ಸಸ್ ಮತ್ತು ಜರ್ನಲ್ ಆಫ್ ನರ್ಸಿಂಗ್ ಸೈನ್ಸಸ್ ಆರಂಭಿಸಲಾಗಿದೆ ಎಂದು ಸಚ್ಚಿದಾನಂದ ಹೇಳಿದರು.

## 25 ಸಾವಿರ ಅಧ್ಯಾಪಕರಿಗೆ ತರಬೇತಿ

ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿರುವ 25 ಸಾವಿರ ಬೋಧಕ ಸಿಬ್ಬಂದಿಗೆ ಕಾಲ ಕಾಲಕ್ಕೆ ಆಧುನಿಕ ಬೆಳವಣಿಗೆಗೆ ಅನುಸಾರವಾಗಿ ತರಬೇತಿ ನೀಡಲು ಉದ್ದೇಶಿಸಲಾಗಿದೆ. ರಿಸರ್ಚ್ ಅಂಡ್ ಮೆಥಡಾಲಜಿ ಬಗ್ಗೆ ತರಬೇತಿ ನಡೆಯುತ್ತದೆ. ಈ ತರಬೇತಿಯನ್ನು ಪ್ರಾದೇಶಿಕವಾರು ನಡೆಸಲಾಗುತ್ತದೆ ಎಂದು ಸಚ್ಚಿದಾನಂದ ತಿಳಿಸಿದರು.